ಒ.ಎಸ್. - 07/2018

ಡಿ-ಡಬ್ಲ್ಯು - 04

**ದಿನಾಂಕ 19-12-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು - ವಾದಿ ಪರ ಐಆರ್ ಬಿ ವಕೀಲರಿಂದಃ**

ನಾನು ಈಗ ತೋನ್ಸೆ ರೆಸಿಡೆನ್ಸಿಯಲ್ಲಿ ವಾಸವಾಗಿರುತ್ತೇನೆ. ಮೊದಲು ನಾನು ಸಿಟಿ ಆಸ್ಪತ್ರೆಯ ಬಳಿ ವಾಸವಾಗಿದ್ದೆ . ನನ್ನ ಮುಖ್ಯವಿಚಾರಣೆಯಲ್ಲಿ ಮಾತೃಶ್ರೀ ಅಪಾರ್ಟ್ ಮೆಂಟ್ ಎಂದು ಕಾಣಿಸಿದ್ದು ಈಗ ನಾನು ಅಲ್ಲಿ ವಾಸವಾಗಿಲ್ಲ. ಆದ್ದರಿಂದ ಮುಖ್ಯವಿಚಾರಣೆ ಪ್ರಮಾಣ ಪತ್ರದಲ್ಲಿ ಕಾಣಿಸಿರುವ ವಿಳಾಸ ಸರಿ ಇರುವುದಿಲ್ಲ. ವಿಟ್ಟಲ್ ಪೈ ನಾನು ನೋಡಿಲ್ಲ . ವಿಟ್ಟಲ್ ಪೈಗೆ 2 ಗಂಡು ಮತ್ತು 2 ಹೆಣ್ಣು ಮಕ್ಕಳು. ವಿಟ್ಟಲ್ ಪೈ ಯಾವ ಗ್ರಾಮದಲ್ಲಿ ವಾಸವಾಗಿದ್ದರು ಎಂದು ನನಗೆ ಗೊತ್ತಿಲ್ಲ . ದಾವಾ ಆಸ್ತಿಗಳು ಯಾವ ಗ್ರಾಮದಲ್ಲಿ ಇದೆ ಎಂದು ನಿಖರವಾಗಿ ಗೊತ್ತಿಲ್ಲ. 12-04-1972 ರಂದು ಆದ ಸೇಲ್ ಸರ್ಟಿಫಿಕೇಟ್ ನ್ನು ನೋಡಿರುತ್ತೇನೆ. ಯಾರ ಯಾರ ನಡುವೆ ಆಯಿತು ಎಂಬ ಬಗ್ಗೆ ಗೊತ್ತಿಲ್ಲ . ಸಾಕ್ಷಿ ಮುಂದುವರಿದು 12-04-1972 ರಂದು ಆದ ಸೇಲ್ ಸರ್ಟಿಫಿಕೇಟ್ ಮೋಹನ್ ಪೈ ಖರೀದಿಸಿದ ಆಸ್ತಿ ಎಂದು ತಿಳಿದುಬಂದಿರುತ್ತದೆ. ಶಾರಾದ ಬಾಯಿಯನ್ನು ನಾನು ನೋಡಿಲ್ಲ. ಶಾರಾದ ಬಾಯಿ 29-12-1993 ರಂದು ತೀರಿಕೊಂಡಿದ್ದಾರೆ ಎಂದು ಹೇಳಿದ್ದು ಈ ಬಗ್ಗೆ ನನ್ನ ಬಳಿ ದಾಖಲೆ ಇಲ್ಲ. ನಾನು ಮುಖ್ಯವಿಚಾರಣೆಯಲ್ಲಿ ಹೇಳಿದ ವೀಲುನಾಮೆಯನ್ನು ನೋಡಿರುತ್ತೇನೆ ಆದರೇ ಅದು ಯಾವ ದಿನಾಂಕದಂದು ಆಯಿತು ಎಂದು ನೆನಪಿಲ್ಲ . ಸದ್ರಿ ವೀಲುನಾಮೆ ನೊಂದಾವಣೆ ಆಗಿರುವುದಿಲ್ಲ . ನಾನು ನನ್ನ ಮುಖ್ಯವಿಚಾರಣೆಯನ್ನು ಮೋಹನ್ ಪೈ ರವರು ಕೊಟ್ಟ ಅನುಭವದ ಮೇಲೆ ಹೇಳಿರುತ್ತೇನೆ . ಈ ಬಗ್ಗೆ ದಾಖಲೆಗಳನ್ನು ಕೂಡ ಮೋಹನ್ ಪೈ ರವರೇ ಕೊಟ್ಟಿರುತ್ತಾರೆ . ವಕೀಲರ ಬಳಿಗೆ ನನ್ನನ್ನು ಮೋಹನ್ ಪೈ ರವರೇ ಕರೆದುಕೊಂಡು

ಹೋಗಿರುತ್ತಾರೆ . ನಿಡಿ-14 ನಾನು ಮತ್ತು ಇತರರರು ಸೇರಿ ಸೃಷ್ಟಿಸಿದ ದಾಖಲೆ ಎಂದರೆ ಸರಿಯಲ್ಲ . ಮೋಹನ್ ಪೈ ರವರು ಯಾವುದೇ ವೀಲುನಾಮೆಯನ್ನು ಬರೆದಿರಲಿಲ್ಲ ಎಂದರೆ ಸರಿಯಲ್ಲ .

**ಉಳಿಕೆ ಪಾಟೀ ಸವಾಲನ್ನು 4 ನೇ ಪ್ರತಿವಾದಿ ಪರ ವಕೀಲರು ಮಾಡಿರುವ ಪಾಟೀ ಸವಾಲನ್ನೇ ಅಳವಡಿಸಿಕೊಳ್ಳುವುದಾಗಿ ವಾದಿ ಪರ ವಕೀಲರು ತಿಳಿಸಿರುತ್ತಾರೆ .**

**ಮರು ವಿಚಾರಣೆ - ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸ ಇದೆ ಎಂದು ಒಪ್ಪಿದರು

ಪ್ರ. ಹಿ. ಸಿ. ನ್ಯಾ ಉಡುಪಿ.